ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86.

# ದಿನಾಂಕ:17-04-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ :ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./18/2020-21 ದಿನಾಂಕ: 15-04-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಘ.ತ್ಯಾ.ನಿ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀ. ಎ.ಚ್ ರಂಗನಾಥ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ |
| 4. | ಶ್ರೀ. ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ |
| 5. | ಶ್ರೀ ಎಚ್.ಎಂ ಗಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ:67 |
| 6. | ಶ್ರೀಮತಿ ಜಿ. ಶೃತಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-67 |
| 7. | ಶ್ರೀ. ನಾಗರಾಜು | ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ |
| 8. | ಶ್ರೀ. ಹರೀಶ್ ನಾಯಕ್ | ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ |
| 9. | ಶ್ರೀ. ಕೆ.ವಿ ಲೋಕೇಶ್ | ಪಶುಸಂಗೋಪನೆ ವಿಭಾಗ,ನಿರೀಕ್ಷಕರು |
| 10. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ ,ಮಹಾಲಕ್ಷ್ಮೀಲೇಔಟ್ |
| 11. | ಶ್ರೀ. ಮಲ್ಲಯ್ಯ | ಅರಣ್ಯ ಇಲಾಕೆ ಗುತ್ತಿಗೆದಾರರ ಸಿಬ್ಬಂದಿ |
| 12. | ಶ್ರೀಮತಿ ರೂಪ | ಮಹಿಳಾ ಪೊಲೀಸ್ ಕಾನ್ಸಟೆಬಲ್, ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆ |
| 13. | ಶ್ರೀ. ಮಹಾಲಿಂಗಯ್ಯ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್, ಸುಬ್ರಮಣ್ಯನಗರ ಪೊಲೀಸ್ ಠಾಣೆ |
| 14. | ಶ್ರೀ. ಸತೀಶ್ | ಬೀದಿ ದೀಪ ಗುತ್ತಿಗೆದಾರರ ಸಿಬ್ಬಂದಿ |

ಮು.ತಿ.ನೋ.



Scanned by CamScanner

| | | |
|---|---|---|
| 15. | ಗೋಪಾಲ್ ಕೃಷ್ಣ | ಸಂಚಾರಿ ಪೋಲಿಸ್ ಕಾನ್ಸಟೆಬಲ್, ರಾಜಾಜಿನಗರ ಪೊಲೀಸ್ ಠಾಣೆ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಎಪ್ರಿಲ್ ಮಾಹೆಯ ಮೂರನೇ ಶನಿವಾರ ದಿ:17/04/2021ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಸಭೆಗೆ ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**<u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:</u>**

| | |
|---|---|
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಕಾಯ್ದೆ ಹಾಗು ನಿಯಮಗಳ ಬಗ್ಗೆ ಚರ್ಚಿಸಲು ಸಭೆಯಲ್ಲಿ ಮಂಡಿಸಿದರು |
| ಶ್ರೀ. ಹರೀಶ್ ನಾಯಕ್<br>ಬೆಂ.ಜಲ ಮಂಡಲಿ | ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಎಂದರೆ ಯಾವುದೇ ಸಮಯದಲ್ಲಿ ನೈರ್ಮಲ್ಯರಹಿತ ಶೌಚಾಲಯ ಅಥವಾ ತೆರೆದ ಚರಂಡಿ ಅಥವಾ ಯಾವುದೇ ಒಂದು ಗುಂಡಿಯಲ್ಲಿ ಇರುವ ಮಾನವನ ಮಲಮೂತ್ರವನ್ನು ದೈಹಿಕವಾಗಿ ಸ್ವಚ್ಛಗೊಳಿಸಲು, ಸಾಗಿಸಲು, ತೆಗೆದುಹಾಕಲು ಅಥವ ಅನ್ಯಾಥಾ ಯಾವುದೇ ರೀತಿಯಲ್ಲಿ ನಿರ್ವಹಿಸುವುದಕ್ಕಾಗಿ ಒಬ್ಬ ವ್ಯಕ್ತಿ ಮೂಲಕ ಅಥವಾ ಒಂದು ಸ್ಥಳಿಯ ಪ್ರಾಧಿಕಾರದಿಂದ ಅಥವಾ ಒಂದು ಏಜೆನ್ಸಿ ಅಥವಾ ಒಬ್ಬ ಗುತ್ತಿಗೆದಾರನಿಂದ ಮತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿ, ನಿಯಮಿಸಬಹುದಾದಂಥ ರೀತಿಯಲ್ಲಿ ಮಲ ಮೂತ್ರವು ಸಂಪೂರ್ಣವಾಗಿ ಕೊಳೆಯುವ ಮುಂಚೆಯೇ ಅಂಥ ನೈರ್ಮಲ್ಯರಹಿತ ಶೌಚಾಲಯಗಳಿಂದ ಅಥವಾ ರೈಲ್ವೆ ಮಾರ್ಗ ಅಥವಾ ಇತರೆ ಅಂಥ ಸ್ಥಳಗಳಿಂದ ಅಥವಾ ಆವರಣಗಳಿಂದ ಮಾನವನ ಮಲಮೂತ್ರವನ್ನು ತೆಗೆದು ಹಾಕುವ ಕಾರ್ಯದಲ್ಲಿ ತೊಡಗಿಕೊಂಡಿರುವ ಅಥವಾ ಆ ಉದ್ದೇಶಕ್ಕಾಗಿ ನಿಯೋಜಿತರಾಗಿರುವ ಒಬ್ಬ ವ್ಯಕ್ತಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಎಂದು ಸಂದರ್ಭಕ್ಕೆ ಅನುಸಾರವಾಗಿ ಕರೆಯುತ್ತಾರೆ. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಪ್ರತಿಯೊಂದು ಸ್ಥಳಿಯ ಪ್ರಾಧಿಕಾರ ಮತ್ತು ಇತರೆ ಏಜನ್ಸಿಯ ತನ್ನ ನಿಯಂತ್ರಣ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿನ ಒಳಚರಂಡಿ ವ್ಯವಸ್ಥೆಗಳನ್ನು,ರೊಚ್ಚುತೊಟ್ಟಿಗಳನ್ನು ಮತ್ತು ಇತರೆ ಸ್ಥಳಗಳನ್ನು ಸ್ವಚ್ಛಗೊಳಿಸುವುದಕ್ಕಾಗಿ ಮತ್ತು ಜಾಡುಮಾಲಿಗಳು ಮೊದಲಾದವುಗಳನ್ನು ಸ್ವಚ್ಛಗೊಳಿಸುವ ವಿಧನದಲ್ಲಿ ಮಲಮೂತ್ರಗಳನ್ನು ಕೈಗಳಿಂದ ಬಾಚುವಂತಹ ಕೆಲಸಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡುವುದು. ನಿಷೇದಿಸುವುದು. ಅಗತ್ಯತೆಯ ದೃಷ್ಟಯಿಂದ ಯುಕ್ತ ತಂತ್ರಜ್ಞಾನವುಳ್ಳ ಯಂತ್ರೋಪಕರಣಗಳನ್ನು ಬಳಕೆ ಮಾಡುವುದು ಕರ್ತವ್ಯವಾಗಿರತಕ್ಕದ್ದು. ಮತ್ತು ವಿವರವಾಗಿ ಮ್ಯಾನ್ಯಯಲ್ ಸ್ಕ್ಯಾವೆಜಿಜರ್‌ಗಳ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಲಯದಲ್ಲಿ ದಾಖಲಾಗಿರುವ ರಿಟ್ ಪಿಟಿಷನ್ ಸಂಖ್ಯೆ 8928/2020 ರಲ್ಲಿ ಚರ್ಚಿವಾಗಿರುವ ಪ್ರಮುಖ ಅಂಶಗಳ ಬಗ್ಗೆ ಸಭೆಗೆ ತಿಳಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡನ ವಿವೇಕಾನಂದ ಉದ್ಯಾನ ಹಾಗು ಕೇತಮಾರನಹಳ್ಳಿ ಉದ್ಯಾನಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದ್ದು ಇದರಿಂದ ಗಿಡಗಳು ನೀರಿಲ್ಲದೆ ಒಣಗಬಹುದೆಂದು ಶ್ರೀಮತಿ ಗೀತಾ ಶೆನಾಲ್‌ರವರು ದೂರವಾಣಿ ಮೂಲಕ ತಿಳಿಸಿರುವರೆಂದು ಸಭೆಯಲ್ಲಿ ತಿಳಿಸಿದರು. |



ಪು.ತಿ.ನೋ.

[signature]

Scanned by CamScanner

| | |
|---|---|
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ–67 | ವಾರ್ಡನ ವಿವೇಕಾನಂದ ಹಾಗು ಕೇತ್‌ಮಾರನಹಳ್ಳಿ ಉದ್ಯಾನದಲ್ಲಿ ಯಾವುದೇ ನೀರಿನ ಅಭಾವ ಇರುವುದಿಲ್ಲ ಎಂದು ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ–67 | ವಾರ್ಡನ ಪೈಪಲೈನ್ ಉದ್ಯಾನದ ಹತ್ತಿರ ಒಳಚರಂಡಿ ಪೈಪ್ ಸಮಸ್ಯೆಯಿದ್ದು ಅದನ್ನು ದುರಸ್ತಿ ಮಾಡಲು ಅನುಮೊದನೆ ದೊರೆತಿದ್ದು, ಕಾಮಗಾರಿಯನ್ನು ಪ್ರಾರಂಭಿಸಲು ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ , ರವರಿಂದ ಸಲಹೆ ಪಡೆದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡನ ಪೈಪಲೈನ್ ಉದ್ಯಾನ ಹಾಗು ಎಲ್ಲಾ ಉದ್ಯಾನಗಳಲ್ಲಿ ಬೇವಿನ ಮರದ ಸಸಿಗಳನ್ನು ನೆಡಲು ತೋಟಗಾರಿಕೆ ಇಲಾಖೆಗೆ ಸಭೆಯಲ್ಲಿ ಸೂಚಿಸಿದರು |
| ಶ್ರೀ. ಮಂಜುನಾಥ್ ತೋಟಗಾರಿಕೆ ಇಲಾಖೆ | ವಾರ್ಡ್‌ನ 2ನೇ ಮೈನ್ ವಿಶ್ವೇಶ್ವರಯ್ಯ ಉದ್ಯಾನದ ಹತ್ತಿರ ಮ್ಯಾನ್‌ಹೋಲ್‌ಗೆ ಕವರಿಂಗ್ ಸ್ಲ್ಯಾಬ್ ಇಲ್ಲಾವೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ನಾಗರಾಜು ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ | ವಾರ್ಡ್‌ನ 2ನೇ ಮೈನ್‌ನ ದೂರಿಗೆ ಸಂಭಂದಿಸಿದಂತೆ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ–67 | ವಾರ್ಡ್‌ನ 12ನೇ ಮೈನ್, ಒಂಟಿ ಮನೆ ಹತ್ತಿರ ಒಳಚರಂಡಿ ಪೈಪ್ ಸಮಸ್ಯೆಯಿದ್ದು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ. ಹರೀಶ್ ನಾಯಕ್ ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ | ವಾರ್ಡ್‌ನ ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ 12ನೇ ಮೈನ್‌ನ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಕೇತಮಾರನಹಳ್ಳಿ ಹತ್ತಿರ ನಾಯಿಗಳ ಹಾವಳಿ ಜಾಸ್ತಿಯಿದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು |
| ಶ್ರೀ. ಉದಯ ಶಂಕರ್ **ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ 1ನೇ ಆರ್ ಬ್ಲಾಕ್‌ನಲ್ಲಿ ನಾಯಿಗಳ ಹಾವಳಿ ಜಾಸ್ತಿಯಿದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು |
| ಶ್ರೀ. ಕೆ.ವಿ ಲೋಕೇಶ್ ಪಶುಸಂಗೋಪನೆ ವಿಭಾಗ,ನಿರೀಕ್ಷಕರು | ವಾರ್ಡ್‌ನ ಅಧ್ಯಕ್ಷರ ಮತ್ತು ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ನಾಯಿಗಳ ಹಿಡಿಯುವ ಕಾರ್ಯಾಚರಣೆ ಮಾಡುತ್ತಿರುವುದಾಗಿ ಸಭೆಯಲ್ಲಿ ತಿಳಿಸುತ್ತ ಹಿಂದಿನ ಸಭೆಗಳಲ್ಲಿ ಚರ್ಚಿಸಿದಂತೆ, ಸಮಸ್ಯೆಗಳನ್ನು ಪರಿಹರಿಸುವುದಾಗಿ ತಿಳಿಸಿದರು. |
| ಗೋಪಾಲ್ ಕೃಷ್ಣ ಸಂಚಾರಿ ಪೋಲಿಸ್ ಕಾನ್ಸಟೆಬಲ್, | ವಾರ್ಡ್‌ನ ನಾಗಪುರ 11ನೇ ಕ್ರಾಸ್ ಆರ್ಚ್ ಹತ್ತಿರ ಚಪ್ಪಡಿ ಕಲ್ಲು ಮುರಿದಿದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು |



ಪು.ತಿ.ನೋ.

Scanned by CamScanner

| | |
|---|---|
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ–67 | ವಾರ್ಡ್‌ನ ನಾಗಪುರ 11ನೇ ಕ್ರಾಸ್‌ನ ದೂರಿಗೆ ಸಂಭಂದಿಸಿದಂತೆ ಹೊಸ ಚಪ್ಪಡಿ ಕಲ್ಲುಗಳನ್ನು ಅಳವಡಿಸುವುದಾಗಿ ಸಭೆಯಲ್ಲಿ ತಿಳಿಸಿದರು |
| ಶ್ರೀ. ಹರೀಶ್ ನಾಯಕ್ ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ | ವಾರ್ಡ್‌ನ ಚೈತನ್ಯ ಶಾಲೆ ಅತ್ತಿರ ರಸ್ತೆಯ ಮಧ್ಯದಲ್ಲಿ ಮ್ಯಾನ್ ಹೋಲ್ ರಸ್ತೆಯ ಮಟ್ಟದಿಂದ ಮೇಲಿರುವುದು ಕಂಡುಬಂದಿರುತ್ತದೆ ಇದರಿಂದ ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿರುತ್ತದೆ ಮತ್ತು ರಸ್ತೆ ಅಪಘಾತವಾಗುವ ಸಂಭವವಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ ವೇಸ್ಟ ವಾಟರ್ ಮ್ಯಾನ್‌ಯೆಜ್ಮೆಂಟ್ ಸಹಾಯಕ ಅಭಿಯಂತರರಿಗೆ ದೂರವಾಣಿ ಮುಖೇನ ದೂರನ್ನು ತಿಳಿಸಿದರು |
| ಶ್ರೀ. ಮಹಾಲಿಂಗಯ್ಯ ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್ | ವಾರ್ಡ್‌ನ ಸೋಪ್ ಫ್ಯಾಕ್ಟರಿ ವೃತ್ತದಲ್ಲಿ ಹೈಮಾಸ್ಟ್ ದೀಪ, ಮತ್ತು ಮಹಾಲಕ್ಷ್ಮೀಲೇಔಟ್ ಸಿಗ್ನಲ್ ಬಳಿ ಬೀದಿ ದೀಪ ಹಾಗು ಪೈಪ್ ಲೈನ್ ಪಾರ್ಕ್‌ನಲ್ಲಿ ದೀಪಗಳು ಉರಿಯುತ್ತಿಲ್ಲ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್ ಹತ್ತಿರ ಬೀದಿ ದೀಪ ಸಮಸ್ಯೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು |
| ಶ್ರೀ. ಸತೀಶ್ ಬೀದಿ ದೀಪ ಗುತ್ತಿಗೆದಾರರ ಸಿಬ್ಬಂದಿ | ವಾರ್ಡ್ ಅಧ್ಯಕ್ಷರು ಹಾಗು ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್ ರವರ ದೂರಿಗೆ ಸಂಭಂದಿಸಿದಂತೆ ಸಮಸ್ಯೆಯನ್ನು ಸರಿಪಡಿಸುವುದಾಗಿ ಸಭೆಗೆ ಭರವಸೆ ನೀಡಿದರು |
| ಶ್ರೀ. ಎ.ಚ್ ರಂಗನಾಥ್ ಸಹಾಯಕ ಕಾರ್ಯಪಾಲಕ ಅಭಿಯಂತರರು | ವಾರ್ಡ್‌ನಲ್ಲಿ ಹೊಸದಾಗಿ ಮ್ಯಾನ್ ಹೋಲ್‌ಗಳು ಮತ್ತು ಹೊಸದಾಗಿ ಒಳಚರಂಡಿ ಪೈಪ್ ಅಳವಡಿಸಲು ಸಮಸ್ಯೆಯಿರುವ ಸ್ಥಳಗಳನ್ನು ಪಟ್ಟಿ ಮಾಡಿ ಕೊಡಲು ಸಹಾಯಕ ಅಭಿಯಂತರರು ಬೆಂ.ಜಲ ಮಂಡಲಿ ರವರಿಗೆ ಸೂಚಿಸಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ಹಿರಿಯ ಆರೋಗ್ಯ ಪರೀವಿಕ್ಷಕರನ್ನು ಉದೇಶಿಸಿ ಕೋವಿಡ್ ಪ್ರಕರಣಗಳನ್ನು ನಿಗ ವಹಿಸಿ ತುರ್ತು ಕ್ರಮ ಕೈಗೊಳಲು ಮತ್ತು ಸುಕ್ತ ಚಿಕಿತ್ಸೆ ಕೊಡಿಸಲು ಕ್ರಮ ಕೈಗೊಳಲು ತಿಳಿಸಿದರು ಮತ್ತು ಕೋವಿಡ್ ಪ್ರಗತಿ ಪರಿಶಿಲನೇ ಮಾಡಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್–67 ಕ್ಕೆ ಸಂಭಂದಿಸಿದ ಗೆಳೆಯರ ಬಳಗದಲ್ಲಿರುವ ಆರೋಗ್ಯ ಕೇಂದ್ರ ತಪಾಸಣೆ ಮಾಡಿದರು ,ಈ ಸಂದರ್ಭದಲ್ಲಿ ಮಹಾಲಕ್ಷ್ಮೀಲೇಔಟ್‌ನ ಎಂ.ಓ.ಎಚ್ ಹಾಜರಿದ್ದರು. ಆರೋಗ್ಯ ಕೇಂದ್ರವನ್ನು ಸರ್ಕಾರೇತರ ಸಂಸ್ಥೆಯೊಂದು ನೆಡೆಸುತ್ತಿರುತ್ತಾರೆ ಹಾಗು ಉಸ್ತುವಾರಿ ವೈದ್ಯರೊಂದಿಗೆ ಚರ್ಚಿಸಿದರು, ಕೋವಿಡ್‌ಗೆ ಸಂಭಂದಿಸಿದಂತೆ, ಔಷದಿಗಳು, ಅರೆ ವೈದ್ಯಕೀಯ ಸಿಬ್ಬಂದಿ ಕರ್ತವ್ಯ ನಿರ್ವಹಿಸುತಿದ್ದು ಹಾಗು ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುತ್ತಿರುವುದರ ಬಗ್ಗೆ ಸಾರ್ವಜನಿಕರೊಂದಿಗೆ ಚರ್ಚಿಸಿ ವಿಷಯ ತಿಳಿದುಕೊಂಡರು. |

**ಪ್ರತಿಯನ್ನು**

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.



ಪು.ತಿ.ನೋ.

Scanned by CamScanner

5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

**ಕಾರ್ಯದರ್ಶಿ ಹಾಗೂ**
**ಸಹಾಯಕ ಅಭಿಯಂತರರು, ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧ್ಯಕ್ಷರು ಹಾಗೂ**
**ನೋಡಲ್ ಅಧಿಕಾರಿಗಳು ವಾರ್ಡ್– 6**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

Scanned by CamScanner